ದಿ: 25-03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಜಿ ಎಸ್ ಆರ್ ಕೆ ವಕೀಲರಿಂದ

ನಾನು ಚಿಕ್ಕವನಿದ್ದಾಗಿನಿಂದಲೂ ಪ್ರತಿವಾದಿಯು ನನಗೆ ಪರಿಚಯಸ್ಥ. ನನಗೆ ಒಬ್ಬ ಸಹೋದರಿ & ಮೂವರು ಸಹೋದರರಿದ್ದಾರೆ. ನನ್ನ ತಂದೆ ಮೃತಪಟ್ಟಿದ್ದಾರೆ. ನನ್ನ ತಂದೆಯು ಸಾಕಷ್ಟು ಕೃಷಿ ಜಮೀನುಗಳನ್ನು ಖರೀದಿಸಿದ್ದರು. ಪಾಲು ವಿಭಾಗದಲ್ಲಿ ನನಗೆ, ನನ್ನ ಸಹೋದರರು & ಸಹೋದರಿಗೆ ತಲಾ 17 ಎಕರೆ ಜಮೀನು ಬಂದಿದೆ. ನನ್ನ ಸಹೋದರರು ಈಗ ಜೀವಂತ ಇಲ್ಲ. ನನ್ನ ತಾಯಿಯು ನನ್ನ ಜೊತೆ ಮತ್ತು ನನ್ನ 3 ನೇ ಅಣ್ಣ ಶೇಷಗಿರಿರವರ ಹೆಂಡತಿಯ ಜೊತೆ ಇರುತ್ತಾರೆ. ನನ್ನ ಇನ್ನೂ ಇಬ್ಬರು ಸಹೋದರರ ಹೆಸರುಗಳು ವೆಂಕಟನಾರಾಯಣ & ಸುಬ್ಬಾರಾವ್. ನನಗೆ ಇಬ್ಬರು ಮಕ್ಕಳಿದ್ದು, ಅವರ ಹೆಸರುಗಳು ಚೈತನ್ಯ ಕುಮಾರ್ & ಕಾವ್ಯ. ನನಗೆ ಎರಡನೇ ಮಗುವಾಗಿ ಶರತ್ ಎಂಬ ಮಗ ಜನಿಸಿದ್ದು, ಆತನು 5 ತಿಂಗಳು ಇದ್ದಾಗ ಆತನನ್ನು ನನ್ನ 3 ನೇ ಅಣ್ಣ ಶೇಷಗಿರಿರವರಿಗೆ ದತ್ತು ಕೊಟ್ಟಿದ್ದೆನು. ಸದರಿ ಶೇಷಗಿರಿ ರವರಿಗೆ ಮಕ್ಕಳಿರಲಿಲ್ಲ.

ಪ್ರತಿವಾದಿಯು ವ್ಯವಸಾಯ & ಭತ್ತದ ವ್ಯಾಪಾರ ಮಾಡುತ್ತಾನೆ. ಆತನು ಯಾವುದೇ ಅಂಗಡಿ ಇಟ್ಟುಕೊಂಡಿಲ್ಲ & ಆ ಬಗ್ಗೆ ಯಾವುದೇ ಪರವಾನಿಗೆ ಪಡೆದುಕೊಂಡಿಲ್ಲ. ಕೇವಲ ಕಮಿಷನ್ ಆಧಾರದ ಮೇಲೆ ಆ ವ್ಯವಹಾರ ಮಾಡುತ್ತಾನೆ. ಪ್ರತಿವಾದಿಯು ಆ ರೀತಿಯ ಯಾವುದೇ ವ್ಯಾಪಾರ ಮಾಡುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ನನ್ನ ಜೊತೆ ಮೊದಲಿನಿಂದಲೂ ಹಣ ಕೊಡುವ & ತೆಗೆದುಕೊಳ್ಳುವ ವ್ಯವಹಾರ ಮಾಡುತ್ತಿದ್ದನು ಎಂದರೆ ನಿಜ. ಆತನು ಪ್ರತಿ ಸಲ ನನ್ನ ಬಳಿ ಸಾಲ ಪಡೆದಾಗಲೂ ವಾಗ್ದಾನ ಪತ್ರವನ್ನು ಬರೆದುಕೊಟ್ಟಿದ್ದನು. ಪ್ರತಿವಾದಿಯು ಸುಮಾರು 20 ವರ್ಷಗಳಿಂದ ನನ್ನ ಬಳಿ ಈ ರೀತಿ ಹಣದ ವ್ಯವಹಾರ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ನುಡಿಯುವುದೇನೆಂದರೆ ಪ್ರತಿವಾದಿಯು ಒಟ್ಟು 3 ಸಲ ನನ್ನ ಬಳಿ ಸಾಲ ಪಡೆದಿದ್ದನು. 2 ಬಾರಿ ಪಡೆದ ಸಾಲವನ್ನು ಹಿಂದಿರುಗಿಸಿದ್ದ. ಮೂರನೇ ಬಾರಿ ಪಡೆದ ಸಾಲವನ್ನು ಹಿಂದಿರುಗಿಸಲಿಲ್ಲ. ಆದ್ದರಿಂದ ಈ ದಾವೆ ಸಲ್ಲಿಸಿದ್ದೇನೆ.

ಗಾಂಧಿನಗರ ಗ್ರಾಮದಲ್ಲಿ ನನ್ನ ಬಹಳಷ್ಟು ಸಂಬಂಧಿಕರು ಇದ್ದಾರೆ ಎಂದರೆ ಸರಿಯಲ್ಲ. ಸ್ವಲ್ಪ ಜನ ಸಂಬಂಧಿಕರು ಇದ್ದಾರೆ. ನನ್ನ ಸಂಬಂಧಿಕರು ನನ್ನ ಬಳಿ ಸಹಾಯ ಕೋರಿ ಬಂದಾಗ ನಾನು ಅವರಿಗೆ ಕೈಲಾದಷ್ಟು ಸಹಾಯ ಮಾಡಿದ್ದೇನೆ. ನಾನು ಯಾರಿಗಾದರೂ ಸಾಲ ಕೊಟ್ಟಾಗ ಅವರಿಂದ ವಾಗ್ದಾನ ಪತ್ರವನ್ನು ಬರೆಸಿಕೊಳ್ಳುತ್ತೇನೆ. ನಾನು ಪ್ರತಿವಾದಿಯನ್ನು ಹೊರತುಪಡಿಸಿ ಬೇರೆ ಯಾರಿಗೂ ಸಾಲ ಕೊಟ್ಟಿಲ್ಲ. ನನಗೆ ತೊಂದರೆಯಾಗುತ್ತದೆ ಎಂಬ ಕಾರಣಕ್ಕಾಗಿ ನಾನು ಯಾರಿಗೂ ಸಾಲ ಕೊಟ್ಟಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೊಟ್ಟ ಸಾಲವನ್ನು ಮರುಪಾವತಿಸದೇ ಇರುವವರ ಮನೆಗೆ ಗುಂಪು ಕಟ್ಟಿಕೊಂಡು

ಹೋಗಿ ಅವರಿಗೆ ಬೆದರಿಕೆ ಹಾಕುತ್ತಿದ್ದೆನು ಎಂದರೆ ಸರಿಯಲ್ಲ. ನಾನು ಬೀದಿಯಲ್ಲಿ ನಿಂತು ಅವರಿಗೆ ಸಾಕಷ್ಟು ಬಾರಿ ಅವಾಚ್ಯ ಶಬ್ದಗಳಿಂದ ಬೈದಿದ್ದೆನು ಎಂದರೆ ಸರಿಯಲ್ಲ. ನಾನು ಕೆಲವೊಮ್ಮೆ ಪೋಲೀಸ್ ಪೇದೆಗಳನ್ನು ಕರೆದುಕೊಂಡು ಅವರ ಮನೆಗೆ ಹೋಗಿ ಬೆದರಿಕೆ ಹಾಕಿದ್ದೆನು ಎಂದರೆ ಸರಿಯಲ್ಲ. ನಾನು ವಾರ್ಷಿಕವಾಗಿ 15 ರಿಂದ 20 ಲಕ್ಷ ಸಾಲ ಕೊಡುವ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ.

ನಾನು ಬಹಳಷ್ಟು ಜನರಿಗೆ ಸಾಲ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಮಾತ್ರ ರೂ.4 ಲಕ್ಷ ಸಾಲ ಕೊಟ್ಟಿದ್ದೆನು. ನಾನು ಲೇವಾದೇವಿ ವ್ಯವಹಾರ ಮಾಡಲು ಯಾವುದೇ ಪರವಾನಿಗೆ ಪಡೆದಿಲ್ಲ ಎಂದರೆ ನಾನು ಆ ರೀತಿಯ ವ್ಯವಹಾರ ಮಾಡುವುದಿಲ್ಲ. ನಾನು ಲಾಭಕ್ಕಾಗಿ ಬಡ್ಡಿ ಲೇವಾದೇವಿ ವ್ಯವಹಾರ ಮಾಡುತ್ತಿದ್ದರೂ ಸಹ ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಕಾಣಿಸಿದ ಪ್ರತಿವಾದಿಯ ಸಾಲವು ಆತನು 3ನೇ ಬಾರಿ ನನ್ನ ಬಳಿ ಪಡೆದ ಸಾಲವಾಗಿತ್ತು. ನಾನು ಬಡ್ಡಿ ಲೇವಾದೇವಿ ವ್ಯವಹಾರದ ಲಾಭವನ್ನು ಮುಚ್ಚಿಡುವ ಸಲುವಾಗಿ ಸರ್ಕಾರದಿಂದ ಪರವಾನಿಗೆ ಪಡೆದಿಲ್ಲ ಎಂದರೆ ಸರಿಯಲ್ಲ.

ಈ ದಾವೆ ಸಲ್ಲಿಸುವ ಮುಂಚೆ ಪ್ರತಿವಾದಿಗೆ 3 ನೋಟೀಸುಗಳನ್ನು ಕೊಟ್ಟಿದ್ದೆನು. ಆ ನೋಟೀಸುಗಳಲ್ಲಿ ಪ್ರತಿವಾದಿಯು ಕೊಡಬೇಕಾದ ಮೊತ್ತವನ್ನು ನಮೂದಿಸಿದ್ದೆನು. ಆ ಮೂರು ನೋಟೀಸುಗಳು ಮೂರು ವ್ಯವಹಾರಗಳಿಗೆ ಸಂಬಂಧಿಸಿದ ನೋಟೀಸುಗಳು ಎಂದರೆ ಸರಿಯಲ್ಲ. ಅವುಗಳು ಎರಡು ವಾಗ್ದಾನ ಪತ್ರಗಳಿಗೆ ಸಂಬಂಧಿಸಿದ ನೋಟೀಸುಗಳು. ಆ ನೋಟೀಸುಗಳಲ್ಲಿ ಅವುಗಳು ಯಾವ ವ್ಯವಹಾರಗಳಿಗೆ ಸಂಬಂಧಿಸಿದ್ದವು ಎಂದು ಬರೆಸಿದ್ದೇನೆ. ಆ ಮೂರೂ ನೋಟೀಸುಗಳಲ್ಲಿ, ಒಂದು ನೋಟೀಸಿನಲ್ಲಿ ಒಂದು ವ್ಯವಹಾರದ ಬಗ್ಗೆ ನಮೂದಿಸಿದ್ದೇನೆ. ಆ ಮೂರೂ ನೋಟೀಸುಗಳನ್ನು ಬೇರೆ ಬೇರೆ ವಕೀಲರ ಮೂಲಕ ಕಳುಹಿಸಿದ್ದೆನು. ಈ ದಾವೆಗೆ ಸಂಬಂಧಿಸಿದಂತೆ ಪ್ರತಿವಾದಿಯು ನನ್ನ ಜೊತೆ ಒಮ್ಮೆ ಮಾತ್ರ ವ್ಯವಹಾರ ಮಾಡಿದ್ದು, ನಾನು ಆತನಿಗೆ ಹೆದರಿಸಲು 3 ನೋಟೀಸ್ ಕಳುಹಿಸಿದ್ದೆನು ಎಂದರೆ ಸರಿಯಲ್ಲ. ಆ ಮೂರೂ ನೋಟೀಸುಗಳಲ್ಲಿ ಮೂರು ದಾವೆ ಹೂಡುವುದಾಗಿ ಹೆದರಿಸಿದ್ದೆ ಎಂದರೆ ಸರಿಯಲ್ಲ.

ನಿಪಿ-1 ವಾಗ್ದಾನ ಪತ್ರವನ್ನು ಪ್ರತಿವಾದಿಯೇ ಬರೆದಿದ್ದನು. ಇನ್ನೊಂದು ವಾಗ್ದಾನ ಪತ್ರವನ್ನೂ ಸಹ ಪ್ರತಿವಾದಿಯೇ ಬರೆದಿದ್ದನು. ಪ್ರತಿವಾದಿಯು ನನ್ನ ಜೊತೆ ಒಮ್ಮೆ ಮಾತ್ರ ವ್ಯವಹಾರ ಮಾಡಿದ್ದು, ಇನ್ನೊಂದು ವಾಗ್ದಾನ ಪತ್ರವನ್ನು ಭದ್ರತೆಗಾಗಿ ಪ್ರತಿವಾದಿಯಿಂದ ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ಅದನ್ನು ದುರ್ಬಳಕೆ ಮಾಡಿಕೊಂಡು ಆತನ ವಿರುದ್ಧ 2 ದಾವೆಗಳನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ನಾನು ಕಳುಹಿಸಿದ ನೋಟೀಸುಗಳಲ್ಲಿ ಪ್ರತಿವಾದಿಯು ನನ್ನ ಜೊತೆ 2 ವ್ಯವಹಾರ ಮಾಡಿದ ಬಗ್ಗೆ ಬರೆಸಿಲ್ಲ ಎಂದರೆ ನಿಜ. ಪ್ರತಿವಾದಿಯು ನನ್ನ ಜೊತೆ ಒಂದೇ ವ್ಯವಹಾರ ಮಾಡಿದ್ದರಿಂದ ನಾನು ನೋಟೀಸಿನಲ್ಲಿ ಒಂದೇ ವ್ಯವಹಾರ ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ನಾನು ದಿ.30-09-2020 ರಂದು ರಾಯಚೂರಿನ ಮಲ್ಲಿಕಾರ್ಜುನ ವಕೀಲರ ಮೂಲಕ ಪ್ರತಿವಾದಿಗೆ ನೋಟೀಸ್ ಕಳುಹಿಸಿದ್ದೆನು ಎಂದರೆ ನಿಜ. ಅದೇ ದಿನ

ನಿಪಿ-4 ರಂತೆ ಸಿಂಧನೂರಿನ ಎಂ. ಡಿ. ಜಾಫರ್ ವಕೀಲರ ಮೂಲಕ ನೋಟೀಸ್ ಕಳುಹಿಸಿದ್ದೆ ಎಂದರೆ ನಿಜ. ಅದೇ ದಿನ ಇನ್ನೊಂದು ನೋಟೀಸನ್ನು ಆರ್ ಕೆ ನಾಗರಾಜ್ ವಕೀಲರ ಮೂಲಕ ಪ್ರತಿವಾದಿಗೆ ಕಳುಹಿಸಿದ್ದೆನು ಎಂದರೆ ನಿಜ. ನಾನು ಹೇಳಿದಂತೆ ಪ್ರತಿವಾದಿಯು 2 ವ್ಯವಹಾರಗಳನ್ನು ನನ್ನ ಜೊತೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿನ ನಮೂದುಗಳನ್ನು ನಾನೇ ಹೇಳಿ ಬರೆಸಿದ್ದೆನು ಎಂದರೆ ಸರಿಯಲ್ಲ.

ನಿಪಿ-1 ನನಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ನಿಪಿ-1 ಬುರಗಪಲ್ಲಿ ದೈವಯತ್ನಂ ತಂದೆ ಸೂರ್ಯನಾರಾಯಣ ರವರ ಹೆಸರಿನಲ್ಲಿ ಇರುವ ಕಾರಣ ಅದು ನನಗೆ ಸಂಬಂಧಿಸಿದ್ದಲ್ಲ ಎಂದರೆ ಪ್ರತಿವಾದಿಯು ನಿಪಿ-1 ರಲ್ಲಿ ನನ್ನ ಹೆಸರನ್ನು ಮೊದಲು ಬರೆಯುವ ಬದಲಾಗಿ ನನ್ನ ತಂದೆಯ ಹೆಸರನ್ನು ಬರೆದು ನಂತರ ತಂದೆಯ ಹೆಸರಿನ ಸ್ಥಳದಲ್ಲಿ ನನ್ನ ಹೆಸರನ್ನು ಬರೆದಿದ್ದಾನೆ. ನನ್ನ ತಂದೆಯ ತಂದೆಯ ಹೆಸರು ವೆಂಕಟನಾರಾಯಣ. ಈ ದಾವೆ ಸಲ್ಲಿಸುವ ಮುಂಚೆ ಪ್ರತಿವಾದಿಗೆ ಸರಿಯಾದ ದಾಖಲೆಯನ್ನು ಬರೆದುಕೊಡುವಂತೆ ಅಥವಾ ನಿಪಿ-1 ನ್ನು ತಿದ್ದುಪಡಿ ಮಾಡಿಕೊಡುವಂತೆ ಕೇಳಿಲ್ಲ ಎಂದರೆ ನಿಜ. ಸಾಕ್ಷಿಯು ಮುಂದುವರೆದು ನಾನು ಅವಿದ್ಯಾವಂತನಾದ ಕಾರಣ ನಿಪಿ-1 ರಲ್ಲಿ ಆಗಿರುವ ತಪ್ಪು ನನ್ನ ಗಮನಕ್ಕೆ ಬಂದಿರಲಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ನಾನು ಸಹಿ ಮಾತ್ರ ಮಾಡಬಲ್ಲೆ. ನಾನು 2 ಅಥವಾ 3 ನೇ ತರಗತಿಯವರೆಗೆ ಶಾಲೆಗೆ ಹೋಗಿದ್ದೆನು. ನನ್ನ ಸಹಿಯನ್ನು ನೋಡಿದರೆ ಹೆಚ್ಚಿನ ವಿದ್ಯಾಭ್ಯಾಸ ಮಾಡಿದ ವ್ಯಕ್ತಿಯು ಸಹಿ ಮಾಡಿದ ಹಾಗೆ ಇದೆ ಎಂದರೆ ಸರಿಯಲ್ಲ. ನಾನು 10 ನೇ ತರಗತಿಗಿಂತ ಹೆಚ್ಚು ವಿದ್ಯಾಭ್ಯಾಸ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ನ್ನು ನಾನೇ ಹೇಳಿ ಬರೆಸಿದ ಕಾರಣ ಅದನ್ನು ಸರಿಪಡಿಸಿಕೊಡುವಂತೆ ಪ್ರತಿವಾದಿಗೆ ಕೇಳಿಲ್ಲ ಎಂದರೆ ಸರಿಯಲ್ಲ. ನಿಪಿ-1 ನನ್ನ ಹೆಸರಿನಲ್ಲಿಲ್ಲದ ಕಾರಣ ಈ ದಾವೆಯಲ್ಲಿ ಪರಿಹಾರ ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

ನಿಪಿ-1 ರ ಮೇಲ್ಭಾಗದಲ್ಲಿ 2 ಲಕ್ಷ್ವನ್ನು ಸಂಖ್ಯೆಯಲ್ಲಿ ನಮೂದಿಸಿದ ಸ್ಥಳದಲ್ಲಿ 2 ನ್ನು ತಿದ್ದುಪಡಿ ಮಾಡಿ ಬರೆಯಲಾಗಿದೆ ಎಂದರೆ ಅದನ್ನು ಪ್ರತಿವಾದಿಯೇ ಬರೆದಿದ್ದನು. ಅದನ್ನು ನಾನೇ ತಿದ್ದುಪಡಿ ಮಾಡಿದ್ದೆ ಎಂದರೆ ಸರಿಯಲ್ಲ. ತಿದ್ದುಪಡಿ ಮಾಡಿದ ಸ್ಥಳದಲ್ಲಿ ಪ್ರತಿವಾದಿಯ ಸಹಿಯನ್ನು ಪಡೆದಿಲ್ಲ ಎಂದರೆ ನಿಜ. ಪ್ರತಿವಾದಿಯು ಕೊಡಬೇಕಾದ ರೂ.2 ಲಕ್ಷ ಸಾಲದ ವ್ಯವಹಾರಕ್ಕೆ ಸಂಬಂಧಿಸಿದ ವಾಗ್ದಾನ ಪತ್ರವನ್ನು ಈ ದಾವೆಯಲ್ಲಿ ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ಸಂಬಂಧಿಸದ ಬೇರೆ ಯಾವುದೋ ವಾಗ್ದಾನ ಪತ್ರವನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಗೆ 1 ವಾಗ್ದಾನ ಪತ್ರದ ನೆರಳಚ್ಚು ಪ್ರತಿಯನ್ನು ತೋರಿಸಿ ಸದರಿ ವಾಗ್ದಾನ ಪತ್ರವನ್ನು ಪ್ರತಿವಾದಿಯು ದಿ.27-01-2014 ರಂದು ನನಗೆ ರೂ.50,000/- ಮೊತ್ತಕ್ಕೆ ಬರೆದುಕೊಟ್ಟಿದ್ದನು ಎಂದರೆ ನಿಜ. ಸಾಕ್ಷಿಯು ಸ್ವತಃ ನುಡಿಯುವುದೇನೆಂದರೆ ಆ ಸಾಲವನ್ನು ಪ್ರತಿವಾದಿಯು ತೀರಿಸಿದ ಕಾರಣ ಆ ವಾಗ್ದಾನ ಪತ್ರವನ್ನು ಆತನಿಗೆ ವಾಪಾಸ್ ಕೊಟ್ಟಿದ್ದೆನು.

ಸಾಕ್ಷಿಗೆ ಇನ್ನೊಂದು ವಾಗ್ದಾನ ಪತ್ರದ ನೆರಳಚ್ಚು ಪ್ರತಿಯನ್ನು ತೋರಿಸಿ ಸದರಿ ವಾಗ್ದಾನ ಪತ್ರವನ್ನು ಪ್ರತಿವಾದಿಯು ದಿ.20-04-2015 ರಂದು ನನಗೆ ರೂ.1,10,000/- ಮೊತ್ತಕ್ಕೆ ಬರೆದುಕೊಟ್ಟಿದ್ದನು ಎಂದರೆ ನಿಜ. ಸಾಕ್ಷಿಯು ಸ್ವತಃ ನುಡಿಯುವುದೇನೆಂದರೆ ಆ ಸಾಲವನ್ನು ಪ್ರತಿವಾದಿಯು ತೀರಿಸಿದ ಕಾರಣ ಆ ವಾಗ್ದಾನ ಪತ್ರವನ್ನು ಆತನಿಗೆ ವಾಪಾಸ್ ಕೊಟ್ಟಿದ್ದೆನು.

ಪ್ರತಿವಾದಿಯು ನನ್ನಿಂದ ಪಡೆದ ರೂ.2 ಲಕ್ಷ ಮೊತ್ತವನ್ನು ಹಿಂದಿರುಗಿಸಲು ಬಂದಾಗ ನಾನು ಮನೆಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ಆಗ ಪ್ರತಿವಾದಿಯು ನನಗೆ ಫೋನ್ ಕರೆ ಮಾಡಿದ್ದು, ನಾನು ನನ್ನ ತಾಯಿಯ ಕೈಯಲ್ಲಿ ಆ ಮೊತ್ತವನ್ನು ಕೊಡುವಂತೆ ಹೇಳಿದ್ದೆನು ಎಂದರೆ ಸರಿಯಲ್ಲ. ನಂತರ ಪ್ರತಿವಾದಿಯು ಆ ಮೊತ್ತವನ್ನು ನನ್ನ ಮಗ ಶರತ್‌ರವರ ಕೈಗೆ ಕೊಟ್ಟಿದ್ದು, ಆತನು ಆ ಮೊತ್ತವನ್ನು ಎಣಿಸಿ ಅದು ಸರಿ ಇದೆ ಎಂದು ಹೇಳಿ ನನ್ನ ತಾಯಿಯ ಕೈಗೆ ಕೊಟ್ಟಿದ್ದನು ಎಂದರೆ ಸರಿಯಲ್ಲ. ನಂತರ ನನ್ನ ಮಗ ನನಗೆ ಫೋನ್ ಕರೆ ಮಾಡಿ ಪ್ರತಿವಾದಿಯು ರೂ. 2 ಲಕ್ಷ ಮೊತ್ತ ಕೊಟ್ಟ ಬಗ್ಗೆ ನನಗೆ ತಿಳಿಸಿದ್ದನು ಎಂದರೆ ಸರಿಯಲ್ಲ. ಪ್ರತಿವಾದಿಯು ಸದರಿ ಮೊತ್ತವನ್ನು ಹಿಂದಿರುಗಿಸಿದ್ದರೂ ಸಹ ನಾನು ನಿಪಿ-1 ನ್ನು ಸೃಷ್ಟಿ ಮಾಡಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಮೂದಿಸಿದ ಮೊತ್ತವನ್ನು ಪ್ರತಿವಾದಿಯು ನನಗೆ ಕೊಡಲು ಹೊಣೆಗಾರನಲ್ಲ ಎಂದರೆ ಸರಿಯಲ್ಲ. ರೂ.2 ಲಕ್ಷಕ್ಕೆ ಸಂಬಂಧಿಸಿದ ಬಡ್ಡಿಯನ್ನು ಪ್ರತಿವಾದಿಯು ನನಗೆ ಕೊಡಲು ಬಂದಾಗ ನಾನು ಚಕ್ರಬಡ್ಡಿ ಸೇರಿಸಿಕೊಡುವಂತೆ ಹೇಳಿ ಆ ಬಡ್ಡಿಯ ಮೊತ್ತವನ್ನು ಪಡೆದುಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ಬಡ್ಡಿ ಮೊತ್ತವನ್ನು ಮಾತ್ರ ಕೊಡಲು ಹೊಣೆಗಾರನಿದ್ದು, ಈಗಲೂ ಸಹ ಆತನು ಅದನ್ನು ಕೊಡಲು ತಯಾರಿದ್ದಾನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ.)

ಓ ಹೇ ಕೇ ಸರಿ ಇದೆ,

1 ನೇ ಅಪರ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ, ಸಿಂಧನೂರು.

ದಿ: 12-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯವಿಚಾರಣೆ: ವಾದಿ ಪರ ಶ್ರೀ ಎಂ ಡಿ ಜೆ ವಕೀಲರಿಂದ

ಸಾಕ್ಷಿಯು ತಾನು ಹಾಜರುಪಡಿಸಿದ ದಾಖಲೆಗಳನ್ನು ನೋಡಿ ಗುರುತಿಸಿದ್ದು, ವಾಗ್ದಾನ ಪತ್ರವನ್ನು ನಿಪಿ-1 ಎಂದು, ಅದರ ಕನ್ನಡ ಅನುವಾದ ಪ್ರತಿಯನ್ನು ನಿಪಿ-1 (ಎ) ಎಂದು, ಅನುವಾದಕಾರರ ಪ್ರಮಾಣ ಪತ್ರವನ್ನು ನಿಪಿ-1 (ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-1 ರಲ್ಲಿರುವ ಪ್ರತಿವಾದಿಯ 3 ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-1 ಸಿ ಯಿಂದ ಇ ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ಆರೋಪಿಯೇ ಬರೆದು ದಸ್ತೂರ ಆಗಿ ಸಹಿ ಮಾಡಿದ್ದನು. ಸಾಕ್ಷಿದಾರರಾಗಿ ಕೆ. ಶ್ರೀನಿವಾಸ ಮತ್ತು ಜಿ. ರಾಮಕೃಷ್ಣರವರು ಸಹಿ ಮಾಡಿದ್ದರು. ನಿಪಿ-1 ರಲ್ಲಿನ ಸದರಿ ಸಾಕ್ಷಿದಾರರ ಸಹಿಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ನೋಟೀಸಿನ ಕಛೇರಿ ಪ್ರತಿಯನ್ನು, ಅಂಚೆ ರಶೀದಿಯನ್ನು & ಅಂಚೆ ಸ್ವೀಕೃತಿ ಪತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-2 ರಿಂದ 4 ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದ

(ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.)

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ.)

ಓ ಹೇ ಕೇ ಸರಿ ಇದೆ,

1 ನೇ ಅಪರ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ, ಸಿಂಧನೂರು.